

## ವರ್ಷಾರಂಭಕ್ಕೆ ನೈಸರ್ಗಿಕ ಗ್ರೀಟಿಂಗ್ಸ್

ನೆಲದ ಹಸುರಿನ, ಬಣ್ಣದ ಬೆಡಗಿನ ಭಾವದೊಡನೆ ಮೂಡಿಬಂದ ನೈಸರ್ಗಿಕ ಶುಭಾಶಯ ಸಾರುವ ಕಲಾಕೃತಿಯಿದು. ಈ ಕೃತಿ ರಚನೆಗೆ ಕೃತಕ ಬಣ್ಣ ಬಳಸಿಲ್ಲ. ಎಲ್ಲವೂ ಹಸುರ ಒಡಲಿನ ಕಳೆ ಸಸ್ಯಗಳಿಂದ ರೂಪಿಸಲಾಗಿದೆ. ಕೃಷಿಕರು ಮತ್ತು ಕಲಾವಿದರಾಗಿರುವ ಶಿರಸಿಯ ಎಲೇಸರದ ಸತೀಶ ಹೆಗಡೆಯವರು ಇದರ ನಿರ್ಮಾತೃ. ತೋಟ, ತಂಪುಗದ್ದೆಗಳ ಅಂಚಿನಲ್ಲಿ ನೈಸರ್ಗಿಕವಾಗಿ ಬೆಳೆದ ವಿವಿಧ ಜಾತಿಯ ಕಳೆ ಸಸ್ಯಗಳನ್ನು ಬಳಸಿಕೊಂಡು ಈ ಅತ್ಯಾಕರ್ಷಕ 'ಗ್ರೀಟಿಂಗ್ಸ್' ಮಾಡಲಾಗಿದೆ. ಪೇಟೆಯಲ್ಲಿ ಹಣ ಕೊಟ್ಟು ತರುವ ಪತ್ರಗಳಿಗಿಂತ ಇದು ಹೆಚ್ಚು ಸುಂದರ. ನೈಸರ್ಗಿಕವೂ ಆಗಿರುವ ಈ ಕಲಾಕೃತಿ, ಕೊಡುವವರಿಗೂ ಮತ್ತು ಇದನ್ನು ಪಡೆಯುವವರಿಗೂ ಖುಷಿ ನೀಡುವುದರಲ್ಲಿ ಸಂಶಯವಿಲ್ಲ.

ವಿವಿಧ ಬಗೆಯ ಕಲಾಸಕ್ತಿ ಹೊಂದಿರುವ ಸತೀಶ ಹೆಗಡೆಯವರ ಈ ಪ್ರಯತ್ನವು ಎಲ್ಲ ಕೃಷಿಕರ ಕುಟುಂಬಕ್ಕೂ, ಕಲಾಸಕ್ತರಿಗೂ ಮಾದರಿ. ವಿವಿಧ ಬಗೆಯ ಕಳೆ ಸಸ್ಯಗಳು, ಡ್ರಾಯಿಂಗ್ ಪೇಪರ್ಸ್, ಬಣ್ಣದ ಹಾಳೆ ಇವಷ್ಟನ್ನು ಬಳಸಿಕೊಂಡು ನೈಸರ್ಗಿಕ ಶುಭಾಶಯ ಪತ್ರಗಳು ಸಿದ್ಧಪಡಿಸಿದ ಪರಿ ಅದ್ಭುತ. ಬೇರೆ ಆಕಾರದ, ಚಿಕ್ಕ ಕಳೆ ಸಸ್ಯಗಳನ್ನು ತಂದು ಅವನ್ನು ದಪ್ಪ ಮ್ಯಾಗಜೀನ್ ಅಥವಾ ಪುಸ್ತಕಗಳ ಪುಟಗಳ ನಡುವೆ ಒಂದು ವಾರ ಹಾಕಿಡಲಾಗಿದ್ದು, ಬಳಿಕ ಅವುಗಳಿಗೆ ಕಲಾಕೃತಿ ರೂಪ ನೀಡಲಾಗಿದೆ. ಪುಸ್ತಕಗಳ ನಡುವೆ ಇಡುವುದರಿಂದ ಕಳೆ ಸಸ್ಯಗಳು ಒಣಗಿ, ಚಪ್ಪಟೆಯಾಗುತ್ತವೆ. ಬಳಿಕ ಅವುಗಳನ್ನು ಹಾಳೆಗೆ ಅಂಟಿಸಲು ಸುಲಭ. ಬಿಳಿಯ ಹಾಳೆಗೆ ಒಣಗಿದ ಕಳೆ ಸಸ್ಯಗಳನ್ನು ಕಲಾತ್ಮಕವಾಗಿ ಬಳಸಿ ಈ ಶುಭಾಶಯ ಚಿತ್ರ ತಯಾರಿಸಲಾಗಿದೆ.

–ಜಿ.ಎಂ. ಬೊಮ್ನಳ್ಳಿ, ಶಿರಸಿ

## ಇದು ರೆಡ್ ನೆಕ್ ಪಾಮ್

ಇದು ಕರಾವಳಿಯ ಬೀಚ್ ಬದಿಯಲ್ಲಿ ಸೊಂಪಾಗಿ ಬೆಳೆಯುವ ತೆಂಗಿನಮರವಲ್ಲ. ಆಕಾರ, ಗಾತ್ರದಲ್ಲಿ ತೆಂಗಿನ ಮರವನ್ನೇ ಹೋಲುವ ಈ ಮರದ ನಿಜವಾದ ಹೆಸರು 'ರೆಡ್ ನೆಕ್ ಪಾಮ್'. ಇದೊಂದು ಅಲಂಕಾರಿಕ ಮರ. ಇದಕ್ಕೆ 'ಡೈಪ್ ಸಿಸ್ ಲಾಸ್ಟೆಲ್ಲಿಯಾನ' ಎಂಬ ವೈಜ್ಞಾನಿಕ ಹೆಸರಿದ್ದು, ಮಡಗಾಸ್ಕರ್‌ನ ಸ್ಥಳೀಯ ಮರವಾಗಿಯೂ ಗುರುತಿಸಿಕೊಂಡಿದೆ. ದಾವಣಗೆರೆಯ ಆಕರ್ಷಕ ಗಾಜಿನಮನೆಯ ಉದ್ಯಾನವನದಲ್ಲಿ ಈ ವೃಕ್ಷಗಳನ್ನು ಬೆಳೆಸಲಾಗಿದೆ. ಕಡಿಮೆ ಸಮಯದಲ್ಲಿ ತೆಳ್ಳಗೆ, ಉದ್ದನೆ ಬೆಳೆಯುವ ಈ ಪಾಮ್, 6ರಿಂದ 10 ಮೀಟರ್ ಎತ್ತರ ಬೆಳೆಯಬಲ್ಲದು. ಸುಮಾರು 40ರಿಂದ 50 ವರ್ಷ ಇದರ ಜೀವಿತಾವಧಿ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ





## ಕ್ಯೂಫಿಯ ಹೂವು

ಮಳೆಗಾಲ, ಬೇಸಿಗೆ ಕಾಲ ಎನ್ನದೆ ತೇವಾಂಶವಿರುವ ಜಾಗದಲ್ಲಿ ನಿತ್ಯಹರಿದ್ವರ್ಣ ಪೊದೆಯಾಗಿ ಬೆಳೆಯುವಂತಹ ಸಸ್ಯ 'ಕ್ಯೂಫಿಯಾ ಹೈಸೋಪಿಫೋಲಿಯಾ'. 60 ಸೆಂಟಿ ಮೀಟರ್ ಎತ್ತರ, 90 ಸೆಂಟಿ ಮೀಟರ್ ಅಗಲವಷ್ಟೇ ಬೆಳೆಯುವ ಈ ಪುಟ್ಟ ಸಸ್ಯವು ನೇರಳೆ, ಬಿಳಿ ಹಾಗೂ ತಿಳಿ ನೀಲಿ ಬಣ್ಣದ ಹೂಗಳನ್ನು ಬಿಡುತ್ತದೆ. ಸಾಮಾನ್ಯವಾಗಿ ನಮ್ಮಲ್ಲಿ ನೇರಳೆ ಬಣ್ಣದ ಹೂವುಗಳೇ ಇದರಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ.

ಈ ಸಸ್ಯದ ಎಲೆಗಳು ತುಂಬಾ ಚಿಕ್ಕದಾಗಿದ್ದು, ಗಾಢ ಹಸುರು ಬಣ್ಣದಿಂದ ಕೂಡಿರುತ್ತವೆ. ಕತ್ತರಿಸಿದ ಸಸ್ಯದ ಭಾಗಗಳಿಂದ ಅಥವಾ ಬೀಜಗಳಿಂದ ಇದನ್ನು ಬಹಳ ಸುಲಭವಾಗಿ ಬೆಳೆಯಬಹುದು. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎನ್ನುವ ಮಾತಿನಂತೆ ಈ ಸಸ್ಯ ಮತ್ತು ಹೂವು ಚಿಕ್ಕದಾಗಿದ್ದರೂ ಇದರ ಕೀರ್ತಿ ಬಹಳ ದೊಡ್ಡದು. ರಾಯಲ್ ಹಾರ್ಟಿಕಲ್ಚರ್ ಸೊಸೈಟಿಯು ನೀಡುವ 'ಗಾರ್ಡನ್ ಮೆರಿಟ್' ಪ್ರಶಸ್ತಿಯನ್ನು ಈ ಸಸ್ಯವು ಪಡೆದುಕೊಂಡಿದೆ. ಈ ಸಸ್ಯವನ್ನು ಕುಂಡಗಳಲ್ಲಿ ಅಲಂಕಾರಕ್ಕಾಗಿ ಮತ್ತು ಉದ್ಯಾನವನಗಳಲ್ಲಿ ಬೇರೆ ಬೇರೆ ಆಕಾರಗಳಲ್ಲಿ ಕತ್ತರಿಸಿ ಬೆಳೆಸುತ್ತಾರೆ.

–ಜಯಂತಿ ರಾಘವೇಂದ್ರ, ಆಗುಂಬೆ